**ದಿನಾಂಕಃ 20.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ವಾದಿ ಪರ ಶ್ರೀ. ಕೆ.ಟಿ.ಟಿ. ವಕೀಲರಿಂದ**

1) ದಾವಾ ಸ್ವತ್ತನ್ನು ನನಗೆ ದಾನದ ಮೂಲಕ ನೀಡಿದ್ದರು. ದಾವಾ ಸ್ವತ್ತಿನ ಖಾತೆ ನನ್ನ ತಂದೆ ಹೆಸರಿನಿಂದ ನನಗೆ ಬಂದಿರುತ್ತದೆ. ಯಾವ ವರ್ಷದಲ್ಲಿ ಆ ರೀತಿ ಖಾತೆ ಬದಲಾವಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. 1989-90 ರಲ್ಲಿ ನಾನು ಮನೆ ಕಟ್ಟುವ ಪೂರ್ವದಲ್ಲಿಯೇ ಖಾತೆ ಬದಲಾವಣೆ ಆಗಿತ್ತು. 1989-90 ಕ್ಕೂ ಪೂರ್ವದಲ್ಲಿ ನನ್ನ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಸಿಡಿರುವುದಿಲ್ಲ.

2) ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ವಾದಿಯು 2008 ನೇ ಸಾಲಿನಲ್ಲಿ ನನ್ನ ಮನೆಯನ್ನು ಬಾಡಿಗೆಗಾಗಿ ನೀಡುವಂತೆ ಕೇಳಿದ್ದರು. ಆದರೆ ಯಾವ ತಿಂಗಳಿನಲ್ಲಿ ಆ ರೀತಿ ಮನೆಯನ್ನು ಕೇಳಿದ್ದರು ಎಂದು ನನಗೆ ನೆನಪಿಲ್ಲ. ವಾದಿ ನನ್ನ ಸಂಬಂಧಿಕ ಇರುವ ಕಾರಣ ಆತನಿಗೆ ಮನೆಯನ್ನು ಬಾಡಿಗೆಗೆ ನೀಡಿದ ಕಾಲಕ್ಕೆ ಯಾವುದೇ ಬರವಣಿಗೆಯನ್ನು ಮಾಡಿಕೊಳ್ಳಲಿಲ್ಲ. ವಾದಿ ಚಾರಿಟಬಲ್ ಹಾಸ್ಟಲ್ ಅನ್ನು ಮಾಡುವ ಸಲುವಾಗಿ ಮನೆಯನ್ನು ಬಾಡಿಗೆಗೆ ಕೇಳಿದ್ದರು. ಆ ರೀತಿ ವಾದಿ ಮನೆಯನ್ನು ಕೇಳಿದ ಕಾಲಕ್ಕೆ ಆತ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ಮಾಡುತ್ತಿದ್ದರು ಮತ್ತು ನಾನು ಸಹಾ ಆ ಕಾಲಕ್ಕೆ ಸರ್ಕಾರಿ ನೌಕರಿಯಲ್ಲಿ ಇದ್ದೆನು. ವಾದಿ 2008 ರಲ್ಲಿ ಮನೆಯನ್ನು ಕೇಳಿದ ತಕ್ಷಣವೇ ನಾನು ಆತನಿಗೆ ಮನೆಯನ್ನು ಬಿಟ್ಟುಕೊಟ್ಟಿದ್ದೆನು.

3) ವಾದಿ ನನಗೆ ಸೆಪ್ಟೆಂಬರ್ 2018 ನೇ ಸಾಲಿನವರೆಗೂ ಬಾಡಿಗೆಯನ್ನು ನೀಡಿರುತ್ತಾರೆ. 2008 ರಲ್ಲಿ ನಾನು ರಾಮನಗರದಲ್ಲಿ ಕೆಲಸ ಮಾಡುತ್ತಿದ್ದೆನು. 2008 ರಿಂದ ಸೆಪ್ಟೆಂಬರ್ 2018 ನೇ ಸಾಲಿನವರೆಗೂ ವಾದಿ ಬಾಡಿಗೆಯ ಹಣವನ್ನು ಸ್ವತಃ ತಂದು ನನಗೆ ನೀಡುತ್ತಿದ್ದರು. ಆ ರೀತಿ ಬಾಡಿಗೆ ನೀಡಿದ್ದರು ಎಂದು ತೋರಿಸಲು ನಮ್ಮ

ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಸೆಪ್ಟೆಂಬರ್ 2018 ಕ್ಕೂ ಪೂರ್ವದಲ್ಲಿ ವಾದಿ ನಿಮ್ಮ ಮನೆಯಲ್ಲಿ ಹಾಸ್ಟಲ್ ವ್ಯವಹಾರವನ್ನು ಸ್ಥಗಿತಗೊಳಿಸಿದ್ದರು ಎಂದರೆ ಸಾಕ್ಷಿಯು ಯಾವ ಕಾಲಕ್ಕೆ ಆತ ಹಾಸ್ಟಲ್ ಪ್ರಾರಂಭಿಸಿ ಯಾವ ಕಾಲಕ್ಕೆ ನಿಲ್ಲಿಸಿದ್ದರು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4) 2008 ರಿಂದ 2018 ರವರೆಗೂ ನಾನು ಮಳೂರು ಪಟ್ಟಣದಲ್ಲಿ ವಾಸವಿರಲಿಲ್ಲ. ನಾನು 2000 ರ ದ ಇಸವಿಯಿಂದಲೂ ಮಳೂರು ಪಟ್ಟಣದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು 2000 ರ ದ ಇಸವಿಯಿಂದಲೂ ಮಳೂರು ಪಟ್ಟಣದಲ್ಲಿ ವಾಸವಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. 2018 ರ ವೇಳೆಗೆ ಆಗಲೇ ನನ್ನ ಮತ್ತು ವಾದಿಯ ನಡುವೆ ವೈಮನಸ್ಸು ಉಂಟಾಗಿತ್ತು ಎಂದರೆ ಸರಿಯಲ್ಲ. ವಾದಿ ನನಗೆ ಅಕ್ಟೋಬರ್ 2018 ರಲ್ಲಿ ನೋಟೀಸನ್ನು ನೀಡಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರವನ್ನು ದಿಃ07.11.2018 ರಂದು ನೀಡಿ ಅದರಲ್ಲಿ ನಾನು ಬಾಡಿಗೆ ವಿಚಾರವನ್ನು ತಿಳಿಸಿದ್ದೆನು. ಸದರಿ ನೋಟಿಸೀನಲ್ಲಿ ನಾನು ಚಾರಿಟಬಲ್ ಹಾಸ್ಟಲ್ ಗಾಗಿ ಮನೆಯನ್ನು ಬಾಡಿಗೆಗೆ ಪಡೆದಿರುತ್ತೀರೀ ಎಂಬ ವಿಚಾರವನ್ನು ನಾನು ಹೇಳಿರುವುದಿಲ್ಲ ಎಂದರೆ ಸರಿ. ಆ ರೀತಿ ನೋಟೀಸು ನೀಡಿದ ನಂತರ ಜನವರಿ 2019 ರಲ್ಲಿ ನಾನು ವಾದಿಗೆ ಬಾಡಿಗೆ ಬೇಡಿ ನೋಟೀಸನ್ನು ನೀಡಿದ್ದೆನು ಎಂದರೆ ಸರಿ. ಸದರಿ ನೋಟೀಸು ನೀಡುವ ಪೂರ್ವದಲ್ಲಿ ವಾದಿಯು ನನ್ನ ಮನೆಯಲ್ಲಿ ಬಾಡಿಗೆದಾರನಾಗಿ ಇರುತ್ತಾನೆ ಎಂದು ತೋರಿಸಲು ಯಾವುದೇ ದಾಖಲೆಯು ಇರುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

5) ವಾದಿಯು ತಾನು ನೀಡಿದ ನೋಟೀಸೀನಲ್ಲಿ ತಾನು ದಾವಾ ಸ್ವತ್ತನ್ನು ಖರೀದಿ ಮಾಡಿರುವುದಾಗಿ ಮಾತ್ರ ತಿಳಿಸಿರುತ್ತಾರೆ. ಸದರಿ ನೋಟೀಸಿಗೆ ನಾನು ಆತ ಕ್ರಯದಾರ ಆಗಿರದೇ ಕೇವಲ ದಾವಾ ಸ್ವತ್ತಿನಲ್ಲಿ ಬಾಡಿಗೆದಾರ ಆಗಿರುತ್ತಾರೆ ಎಂದು ತಿಳಿಸಿ ಪ್ರತ್ಯುತ್ತರ ನೋಟೀಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 2000 ರದ ಸಾಲಿನಲ್ಲಿ

ವಾದಿಯು ದಾವಾ ಸ್ವತ್ತು ಹಾಸ್ಟಲ್ ನಡೆಸಲು ಅನುಕೂಲ ಆಗುತ್ತದೆ ಎಂಬ ಕಾಲಕ್ಕೆ ನನ್ನಲ್ಲಿ ಮನೆಯನ್ನು ಕೇಳಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಮನೆಯನ್ನು ಬಾಡಿಗೆ ನೀಡುವುದಿಲ್ಲ ಆದರೆ ಮಾರಾಟ ಮಾಡುತ್ತೇನೆ ತೆಗೆದುಕೊಳ್ಳಿ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಲ. ಅದರಂತೆ ಸದರಿ ಮನೆಯ ಮಾರಾಟದ ಕುರಿತು ಸಾಕ್ಷಿದಾರರ ಸಮಕ್ಷಮ ವಾದಿಯು ಮನೆಯನ್ನು ಒಟ್ಟು ರೂ.2,50,000/- ಹಣಕ್ಕೆ ಖರೀದಿ ಮಾಡಲು ಮಾತುಕತೆ ಮಾಡಿದರು ಎಂದರೆ ಸರಿಯಲ್ಲ. ಅದರಂತೆ ನಾನು ಕ್ರಯದ ಪ್ರತಿಫಲ ರೂ.2,48,000/- ಹಣವನ್ನು ಪಡೆದುಕೊಂಡು ಕ್ರಯ ಪತ್ರವನ್ನು ಬರೆಸಿಕೊಳ್ಳಿ ಎಂದು ತಿಳಿಸಿದ್ದೆನು ಎಂದರೆ ಸರಿಯಲ್ಮ. ನೋಂದಣಿಗೆ ಬೇಕಾದ ಹಣವನ್ನು ಇಟ್ಟುಕೊಂಡು ವಾದಿಯು 2 ವಾರಗಳ ಅವಧಿಯಲ್ಲಿಯೇ ಕ್ರಯ ಪತ್ರವನ್ನು ಬರೆಸಿಕೊಳ್ಳಲು ತಯಾರು ಇರುವುದಾಗಿ ತಿಳಿಸಿದ್ದು ನಾನು ಆ ಕಾಲಕ್ಕೆ ನನ್ನಹೆಸರಿಗೆ ಇನ್ನು ಖಾತೆ ಆಗಿರುವುದಿಲ್ಲ ಎಂದು ಹೇಳಿ ಸಮಯ ಮುಂದೂಡಿದ್ದೆನು ಎಂದರೆ ಸರಿಯಲ್ಲ.

6) ನಾನು ಸರ್ಕಾರಿ ನೌಕರಿಯಲ್ಲಿ ಇದ್ದು ಅನೇಕ ಕಡೆ ವರ್ಗಾವಣೆ ಆಗುತ್ತಿದ್ದ ಕಾರಣ ವಾದಿಯು ಕ್ರಯ ಪತ್ರ ನೋಂದಾಯಿಕೊಡುವಂತೆ ಕೇಳಿದಾಗಲೆಲ್ಲಾ ಸಮಯ ಮುಂದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. 2008 ರಲ್ಲಿ ವಾದಿಯು ತಾನು ನಿವೃತ್ತಿಯ ಅಂಚಿನಲ್ಲಿ ಇರುವ ಕಾರಣ ತನಗೆ ಕ್ರಯ ಪತ್ರವನ್ನು ಮಾಡಿಕೊಡಿ ಮತ್ತು ತಾನು ಹಾಸ್ಟಲ್ ಅನ್ನು ನೋಂದಾಯಿಸಬೇಕಾಗಿದೆ ಎಂದು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಆ ವೇಳೆಗೆ ನಾನು ಇನ್ನೂ ಖಾತೆ ನನ್ನ ಹೆಸರಿಗೆ ಆಗದ ಕಾರಣ ದಾವಾ ಸ್ವತ್ತಿನ ಸ್ವಾಧೀನವನ್ನು ನಿನಗೆ ಈಗಾಗಲೇ ಬಿಟ್ಟು ಕೊಟ್ಟಿರುವ ಕಾರಣ ನೀವು ವ್ಯವಹಾರವನ್ನು ಬೇಕಾದ ರೀತಿ ಮಾಡಿಕೊಳ್ಳಿ ಎಂದು ವಾದಿಗೆ ನಾನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆ ವೇಳೆಗೆ ವಾದಿಯು ತನಗೆ ಒಂದು ದಾಖಲೆ ಬೇಕು ಎಂದು ಕೇಳಿದಾಗ ನಾನು ಆತನಿಗೆ ದಿ:22.10.2008 ರಂದು ಒಂದು ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿ

ಆ ಪತ್ರಕ್ಕೆ ಸಾಕ್ಷಿದಾರರ ಸಮಯಕ್ಷಮ ಸಹಿ ಮಾಡಿ ಅದನ್ನು ವಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಕ್ರಯ ಕರಾರು ಪತ್ರ ಮಾಡಿದ ಕಾಲದಿಂದಲೂ ವಾದಿ ನನಗೆ ಕ್ರಯ ಪತ್ರ ಮಾಡಿಕೊಡುವಂತೆ ಕೇಳಿದರೂ ಸಹಾ ಆತ ನನ್ನ ಸಂಬಂಧಿ ಇರುವ ಕಾರಣ ಸಮಯ ಮುಂದೆ ಹಾಕಿದ್ದೆನು ಎಂದರೆ ಸರಿಯಲ್ಲ. ಅದೇ ರೀತಿ ಆತ ನನ್ನ ಸಂಬಂಧಿ ಇದ್ದ ಕಾರಣ ನಾನು ನಿವೃತ್ತಿ ಹೊಂದಿದ ನಂತರ ಅದನ್ನು ಕ್ರಯ ಮಾಡಿಕೊಡುವಂತೆ ಕೇಳಿದರೂ ಸಹ ನಾನು ಕ್ರಯ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

7) 2018ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ಬದಲಾವಣೆ ಆದ ನಂತರ ನಾನು ಆ ಸ್ವತ್ತನ್ನು ಬೇರೆ ವ್ಯಕ್ತಿಗೆ ಮಾರಾಟ ಮಾಡಲು ಮುಂದಾದಾಗ ವಾದಿ ನನಗೆ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ವಾದಿ ಪಂಚಾಯಿತಿಯವರಿಗೂ ಸಹ ನೋಟೀಸನ್ನು ನೀಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ದಾಖಲೆಯನ್ನು ನೋಡಿ ನನ್ನ ಸಹಿಯನ್ನು ಗುರುತಿಸುತ್ತೇನೆ. ಪ್ರತಿವಾದಿಯು ತನ್ನ ವಕಾಲತ್ ನಾಮೆ ಮೇಲೆ ಇರುವ ಸಹಿಯನ್ನು ನೋಡಿ ಅದನ್ನು ತನ್ನದೇ ಎಂದು ಗುರುತಿಸುತ್ತಾರೆ. ನಿಪಿ.4ರ ನೋಟೀಸನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಇರುವ ಸಹಿಯನ್ನು ಕೇಳಲಾಗಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ಸದರಿಯನ್ನು ಸಹಿಯನ್ನು ನಿಶಾನೆಗೊಳಿಸಲು ಬೇಡ ಎಂದು ಮಾನ್ಯ ವಕೀಲರು ತಿಳಿಸಿರುತ್ತಾರೆ. ನಿಪಿ.1 ರ ದಾಖಲೆಯನ್ನು ಸಾಕ್ಷಿಯು ನೋಡಿ ಅದರಲ್ಲಿ ಇರುವ ಸಾಕ್ಷಿ ತನ್ನದಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಂಪೂರ್ಣವಾಗಿ ನಿಮ್ಮ ಸಹಿಯನ್ನು ಗುರುತಿಸಲು ಸಾಧ್ಯವಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ.1 ರ ದಾಖಲೆ ಮೇಲೆ ಇರುವ ಸಹಿ ನನ್ನದೇ ಆಗಿದ್ದರೂ ಸಹಾ ನಾನು ಅದು ನನ್ನದಲ್ಲ ಎಂದು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8) ನಾನು ದಾವಾ ಸ್ವತ್ತನ್ನು ಕ್ರಯ ಕರಾರು ಪತ್ರದ ಮೇಲೆ ವಾದಿಗೆ ಬರೆದುಕೊಟ್ಟು ವಾದಿಗೆ ಸ್ವಾಧೀನವನ್ನು ನೀಡಿರುವ ಕಾರಣ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ

ಹಕ್ಕು ಭಾದ್ಯತೆ ಉಳಿದಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಾನು ಮನೆಯನ್ನು ಬಾಡಿಗೆಗೆ ನೀಡಿದ ಸಮಯದಿಂದ ಅಂದರೆ 2008 ರಿಂದ ಈಗಲೂ ಸಹ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ. ವಾದಿಯು ದಾವಾ ಸ್ವತ್ತಿನಲ್ಲಿ ಬಾಡಿಗೆಗೆ ಇರುತ್ತಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ವಾದಿಯು 2000 ದ ಸಾಲಿನಿಂದಲೂ ಸಹಾ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುವುದನ್ನು ನಾನು ಇದುವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೇ ಮಾಡಿರುವುದಿಲ್ಲ ಎಂದರೆ ಸರಿ. ವಾದಿಗೆ ಕ್ರಯ ಪತ್ರವನ್ನು ಬರೆದುಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಾನು ನಿಪಿ.1 ರ ಕ್ರಯ ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**